(96)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ., (ದಕ್ಷಿಣ ಪದವೀಧರರ ಕ್ಷೇತ್ರ) ಇವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 96ಕ್ಕೆ ಮಾನ್ಯ ಗೃಹ ಸಚಿವರ ಹೇಳಿಕೆ:**

**ಸೂಚನೆ:-**

ಭಾರತೀಯ ಸೇನೆಯಲ್ಲಿ ಯೋಧರಾಗಿದ್ದ ಶ್ರೀ ಎಲ್.ಬಿ.ಸುಂದರೇಶ್ ಅವರು 2000ನೇ ಇಸವಿಯಲ್ಲಿ ಪುಲ್ವಾಮಾ ಜಿಲ್ಲೆಯಲ್ಲಿ ಸಂಭವಿಸಿದ ಉಗ್ರರ ಗ್ರೆನೇಡ್ ದಾಳಿಯಲ್ಲಿ ವೀರಮರಣ ಹೊಂದಿದರು. ಇವರು ಮೂಲತಃ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಕಿಕ್ಕೇರಿ ಹೋಬಳಿಯ ಲಿಂಗಾಪುರ ಗ್ರಾಮದವರು. ಮದುವೆಯಾದ ಎರಡೂವರೆ ವರ್ಷಕ್ಕೆ ಪತಿ ಸುಂದರೇಶ್ ಅವರನ್ನು ಕಳೆದುಕೊಂಡ ಪತ್ನಿ ಕಾನೂನುಬದ್ಧವಾಗಿ ತಮಗೆ ದೊರೆಯಬೇಕಾದ ಸವಲತ್ತುಗಳಿಗಾಗಿ ಕಳೆದ 25 ವರ್ಷಗಳಿಂದಲೂ ತಹಶೀಲ್ದಾರ್, ಉಪ ವಿಭಾಗಧಿಕಾರಿ, ಜಿಲ್ಲಾಧಿಕಾರಿ ಕಚೇರಿಗಳಿಗೆ ಇನ್ನಿಲ್ಲದಂತೆ ಅಲೆಯುತ್ತಿದ್ದಾರೆ. ಆದಾಗ್ಯೂ, ಸವಲತ್ತುಗಳು ಮಾತ್ರ ಇನ್ನೂ ದೊರೆತಿಲ್ಲ. ಹಾಗಾಗಿ, ಈ ಗಂಭೀರ ಸಮಸ್ಯೆಯ ಕುರಿತು.

**ಉತ್ತರ:-**

ಯುದ್ಧ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಯೋಧರ ಕುಟುಂಬದವರಿಗೆ ಸರ್ಕಾರದ ವತಿಯಿಂದ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತದೆ :-

1. **ಅನುಗ್ರಹ ಪೂರ್ವಕ ಅನುದಾನ.**

2. **ಉಚಿತ ಜಮೀನು ಅಥವಾ ಜಮೀನು ಬದಲಿಗೆ ನಗದು ಅನುದಾನ:** ಎರಡು ಎಕರೆ ನೀರಾವರಿ ಅಥವಾ ನಾಲ್ಕು ಎಕರೆ ನೀರಾವರಿಯೇತರ ಅಥವಾ ಎಂಟು ಎಕರೆ ಬರಡು ಜಮೀನು ನೀಡಲಾಗುತ್ತಿದೆ. **ಅಥವಾ** ಹಂಚಿಕೆಗಾಗಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಹಾಗೂ ಫಲಾನುಭವಿಗಳು ಇಚ್ಛಿಸಿದಲ್ಲಿ ರೂ.10,00,000/-ಗಳ ನಗದು ಅನುದಾನವನ್ನು ಪಡೆಯಬಹುದು.

3. **ಉಚಿತ ನಿವೇಶನ ಅಥವಾ ನಿವೇಶನ ಬದಲಿಗೆ ನಗದು ಅನುದಾನ**:- ಅಧಿಕಾರಿ/ಕಿರಿಯ ಅಧಿಕಾರಿಗಳಿಗೆ 40x60 ಅಡಿ ಮತ್ತು ಇತರ ಶ್ರೇಣಿಯವರಿಗೆ 30x40 ಅಡಿ ಅಳತೆಯ ಉಚಿತ ನಿವೇಶನವನ್ನು ನೀಡಲಾಗುತ್ತಿದೆ. ಅಥವಾ ಹಂಚಿಕೆಗಾಗಿ ನಿವೇಶನ ಲಭ್ಯವಿಲ್ಲದಿದ್ದಲ್ಲಿ ಹಾಗೂ ಫಲಾನುಭವಿಗಳು ಇಚ್ಛಿಸಿದಲ್ಲಿ ಈ ಕೆಳಕಂಡಂತೆ ನಗದು ಅನುದಾನ ಪಡೆಯಬಹುದು:-

| ಶ್ರೇಣಿ | ಬೆಂಗಳೂರು ನಗರ | ಇತರೆ ಜಿಲ್ಲೆಗಳಲ್ಲಿ |
|---|---|---|
| ಅಧಿಕಾರಿ/ಕಿರಿಯ ಅಧಿಕಾರಿಗಳಿಗೆ | ರೂ. 25.00 ಲಕ್ಷ | ರೂ. 20.00 ಲಕ್ಷ |
| ಇತರೆ ಶ್ರೇಣಿ | ರೂ. 20.00 ಲಕ್ಷ | ರೂ. 15.00 ಲಕ್ಷ |

4. **<u>ಉಚಿತ ಮನೆ ಅಥವಾ ಮನೆ ಬದಲಿಗೆ ನಗದು ಅನುದಾನ:</u>** ಸರ್ಕಾರದಿಂದ ಉಚಿತ ಮನೆ ಕಟ್ಟಿಸಿಕೊಡುವುದು ಅಥವಾ ಅಧಿಕಾರಿ/ಕಿರಿಯ ಅಧಿಕಾರಿಗಳಿಗೆ ರೂ.6,00,000/- ಹಾಗೂ ಇತರೆ ಶ್ರೇಣಿಯವರಿಗೆ ರೂ.4,50,000/-ಗಳ ನಗದು ಅನುದಾನ ನೀಡಲಾಗುತ್ತದೆ.

ನಂ. 913104566, ಸಿಟಿ/ಜಿಡಿ, ಸುಂದರೇಶ ಎಲ್.ಬಿ., ಇವರು, 69 ಬೆಟಾಲಿಯನ್, ಸಿ.ಆರ್ .ಪಿ.ಎಫ್ ನಲ್ಲಿ(ಅರೆ ಸೇನಾ ಪಡೆ) ಕರ್ತವ್ಯ ನಿರ್ವಹಿಸುತ್ತಿದ್ದಾಗ IED ಸ್ಫೋಟಗೊಂಡು ದಿನಾಂಕ 18-02-2000 ರಂದು ಹುತಾತ್ಮರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ, ಸದರಿ ಯೋಧರ ಅವಲಂಭಿತರಾದ ಪತ್ನಿ ಶ್ರೀಮತಿ ಗೀತಾ ಬಿ.ಸಿ., ಇವರಿಗೆ ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುವ ಸೌಲಭ್ಯಗಳನ್ನು ಒದಗಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.

1. **<u>ಅನುಗ್ರಹ ಪೂರ್ವಕ ಅನುದಾನ</u>: ಸರ್ಕಾರದ ಆದೇಶ ಸಂಖ್ಯೆ: ಒಇ 52 ಕಸ್ಯಸೇ 1999, ದಿನಾಂಕ: 25-06-1999 ರನ್ವಯ ಹುತಾತ್ಮ ಯೋಧರ ಪತ್ನಿಗೆ ರೂ. 02.00 ಲಕ್ಷಗಳ ಅನುಗ್ರಹ ಪೂರ್ವಕ ಮೊತ್ತವನ್ನು ದಿನಾಂಕ: 17-10-2000 ರಂದು** ಮಂಜೂರು ಮಾಡಲಾಗಿದೆ. ಸದರಿ ಹುತಾತ್ಮರು ಅರೆ ಸೇನಾಪಡೆಯ ಯೋಧರಾಗಿದ್ದು(Para military force), ಸದರಿ ದಿನಾಂಕದಂದು ರಾಜ್ಯ ಸರ್ಕಾರದ ಆದೇಶಗಳನ್ವಯ ಅನುಗ್ರಹ ಪೂರ್ವಕ ಅನುದಾನ ಪಡೆಯಲು ಮಾತ್ರ ಅವಕಾಶಗಳಿದ್ದವು.

2. ಸರ್ಕಾರದ ಆದೇಶ ಸಂಖ್ಯೆ: ಒಇ 52 ಕಸ್ಯಸೇ 1999, ದಿನಾಂಕ: 25-06-1999 ಕ್ಕೆ ತಿದ್ದುಪಡಿ ತಂದು ಸರ್ಕಾರದ ಆದೇಶ ಸಂಖ್ಯೆ: ಒಇ 132 ಕಸ್ಯಸೇ 2017, ದಿನಾಂಕ: 16-01-2018 ರಲ್ಲಿ ಉಚಿತ ಜಮೀನಿನ ಬದಲಿಗೆ ನಗದು ಅನುದಾನ ಮತ್ತು ಉಚಿತ ನಿವೇಶನದ ಬದಲಿಗೆ ನಗದು ಅನುದಾನ ಸೌಲಭ್ಯಗಳನ್ನು ಅರೆ ಮಿಲಿಟರಿ ಪಡೆಗಳಿಗೆ ವಿಸ್ತರಿಸಲಾಗಿರುತ್ತದೆ. ತದನಂತರ ಸದರಿ ವೀರನಾರಿ ಶ್ರೀಮತಿ ಗೀತಾ. ಬಿ.ಸಿ., ಇವರನ್ನು ಸಂಪರ್ಕಿಸಿ ಈ ಕೆಳಗಿನ ಸೌಲಭ್ಯಗಳನ್ನು ನೀಡಲು ಕ್ರಮ ಕೈಗೊಳ್ಳಲಾಯಿತು.

   (i). **<u>ಉಚಿತ ಜಮೀನು:</u>** ಉಚಿತ ಜಮೀನು ಮಂಜೂರಾತಿಗಾಗಿ ಸದರಿ ವೀರ ನಾರಿ ಶ್ರೀಮತಿ ಗೀತಾ ಬಿ.ಸಿ., ಇವರು ದಿನಾಂಕ: 04-05-2022 ರಂದು ಸೈನಿಕ ಕಲ್ಯಾಣ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇವರ ಅರ್ಜಿಯನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಪತ್ರ ಸಂಖ್ಯೆ: ಸೈಕಪುಇ/14/ಬಿಸಿ/ಸುಂದರೇಶ್ /2022, ದಿನಾಂಕ: 02-09-2022 ರಲ್ಲಿ ಶಿಫಾರಸ್ಸಿನೊಂದಿಗೆ ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಇವರಿಗೆ ಕಳುಹಿಸಲಾಗಿದೆ.

   ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಇವರು ತಮ್ಮ ಪತ್ರ ಸಂಖ್ಯೆ: MDC-RH-MOLND/1465/2022, ದಿನಾಂಕ: 27-10-2022 ರಲ್ಲಿ ತಹಶೀಲ್ದಾರ್, ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಕೆ.ಆರ್ ಪೇಟೆ, ನಾಗಮಂಗಲ, ಪಾಂಡವಪುರ ತಾಲ್ಲೂಕು, ಇವರಿಗೆ ಸದರಿ ವೀರ ನಾರಿಗೆ ಜಮೀನು ಮಂಜೂರಾತಿಗಾಗಿ ನಿಯಮಾನುಸಾರ ಪರಿಶೀಲಿಸಿ, ಜಮೀನು ಲಭ್ಯವಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಉಪ ವಿಭಾಗಾಧಿಕಾರಿ ಮುಖಾಂತರ ವರದಿ/ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿರುತ್ತಾರೆ.

(ii). **ಉಚಿತ ನಿವೇಶನ**: ಸದರಿ ವೀರ ನಾರಿ ಶ್ರೀಮತಿ ಗೀತಾ ಬಿ.ಸಿ., ಇವರು ದಿನಾಂಕ: 04-05-2022 ರಂದು ಉಚಿತ ನಿವೇಶನ ಮಂಜೂರಾತಿಗಾಗಿ ಸೈನಿಕ ಕಲ್ಯಾಣ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇವರ ಅರ್ಜಿಯನ್ನು ಸೈನಿಕ ಕಲ್ಯಾಣ ಇಲಾಖೆಯ ಪತ್ರ ಸಂಖ್ಯೆ: ಸೈಕಪುಇ/14/ಬಿಸಿ/ಸುಂದರೇಶ್/2022, ದಿನಾಂಕ: 02-09-2022 ರಲ್ಲಿ ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಇವರಿಗೆ ಸಲ್ಲಿಸಲಾಗಿತ್ತು.

ಆದರೆ ಶ್ರೀಮತಿ ಗೀತಾ ಬಿ.ಸಿ., ವೈಫ್ ಆಫ್ ಸಿಟಿ/ಜಿಡಿ ಹುತಾತ್ಮ ಸುಂದರೇಶ್ ಎಲ್.ಬಿ., ಇವರು ದಿನಾಂಕ: 27-03-2025 ರ ಮನವಿಯಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಮಂಡ್ಯದ ಸಾತನೂರು ಬಡಾವಣೆಯಲ್ಲಿ ನಿರ್ಮಿಸಿರುವ ಹಾಗೂ ಉಚಿತವಾಗಿ ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನವು ಅಸಮ ನಿವೇಶನವಾಗಿದ್ದು, ಅಂದರೆ ಒಂದು ಮೂಲೆ ಕಡೆ ಚಿಕ್ಕದಾಗಿಯೂ ಇನ್ನೊಂದು ಮೂಲೆ ಅಗಲವಾಗಿರುವುದರಿಂದ ಸದರಿ ನಿವೇಶನದಲ್ಲಿ ಮನೆ ನಿರ್ಮಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಅರ್ಜಿದಾರರು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ರಸ್ತಾವನೆಯನ್ನು ಹಿಂಪಡೆದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಉಚಿತ ನಿವೇಶನ ಮಂಜೂರು ಮಾಡಲು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಕಳುಹಿಸುವಂತೆ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಬೆಂಗಳೂರು ಇವರನ್ನು ಕೋರಿರುತ್ತಾರೆ.

ಅದರಂತೆ ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆ, ದಿನಾಂಕ: 09-06-2025 ರಂದು ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಇವರಿಗೆ ಬರೆದ ಪತ್ರದಲ್ಲಿ ಸಾತನೂರು ಬಡಾವಣೆಯಲ್ಲಿ ನಿರ್ಮಿಸಿರುವ 30*40 ಅಳತೆಯ ನಿವೇಶನಗಳಲ್ಲಿ ನೀಡಲು ಉದ್ದೇಶಿಸಿರುವ ನಿವೇಶನವು ವಾಸಯೋಗ್ಯ ಮನೆ ನಿರ್ಮಿಸಲು ಉಪಯುಕ್ತವಾಗಿಲ್ಲದ ಕಾರಣ ಹಾಗೂ ಅರ್ಜಿದಾರರಿಗೆ ಆಸಕ್ತಿ ಇಲ್ಲದಿರುವುದರಿಂದ ಪ್ರಸ್ತಾವನೆಯನ್ನು ಹಿಂದಿರುಗಿಸುವಂತೆ ಕೋರಿರುತ್ತಾರೆ.

ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಇವರು ದಿನಾಂಕ: 03-07-2025ರ ಪತ್ರದಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಸಾತನೂರು ಬಡಾವಣೆಯಲ್ಲಿ ಖಾಲಿ ಇರುವ 30*40 ಅಳತೆಯ ನಿವೇಶನಗಳು ಅಸಮ ನಿವೇಶನಗಳಾಗಿರುವುದರಿಂದ ಸದರಿ ನಿವೇಶನವು ವಾಸಯೋಗ್ಯ ಮನೆ ನಿರ್ಮಿಸಲು ಉಪಯುಕ್ತವಾಗಿಲ್ಲದ ಕಾರಣ ಸದರಿ ಬಡಾವಣೆಯಲ್ಲಿ ಉಚಿತ ನಿವೇಶನ ಪಡೆಯಲು ಅರ್ಜಿದಾರರಿಗೆ ಆಸಕ್ತಿ ಇಲ್ಲದಿರುವುದರಿಂದ ಪ್ರಸ್ತಾವನೆಯನ್ನು ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಇವರಿಗೆ ಹಿಂದಿರುಗಿಸಿರುತ್ತಾರೆ ಹಾಗೂ ಅರ್ಜಿದಾರರಿಗೆ ಪ್ರತಿಯನ್ನು ಕಳುಹಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಹುತಾತ್ಮ ಯೋಧರಾದ ಸುಂದರೇಶ್ ಎಲ್.ಬಿ., ಇವರ ಪತ್ನಿಯಾದ ವೀರನಾರಿ ಶ್ರೀಮತಿ ಗೀತಾ ಬಿ.ಸಿ., ಇವರಿಗೆ ಉಚಿತ ನಿವೇಶನ

ಮಂಜೂರು ಮಾಡಲು **ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಇವರಿಗೆ ಸೈನಿಕ ಕಲ್ಯಾಣ ಇಲಾಖೆಯಿಂದ ಪ್ರಸ್ತಾವನೆ ಸಲ್ಲಿಸಲಾಗುವುದು.** ಪ್ರಸ್ತುತ ನಿವೇಶನ ಮಂಜೂರಾತಿ ಬಾಕಿ ಇರುತ್ತದೆ.

ಸದರಿ ವೀರನಾರಿಯು ಮನೆ ನಿರ್ಮಿಸುವ ಸಮಯದಲ್ಲಿ ನಗದು ಅನುದಾನವನ್ನೂ ಸಹ ನೀಡಲಾಗುವುದು.

**ಸಂಖ್ಯೆ: ಹೆಚ್‌ಡಿ 49 ಕೆಎಸ್‌ಎಸ್ 2025**

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**